ಕ್ರಮವನ್ನು ಕೆಲವು ಕಡೆ ಮಾತ್ರ ಮಾಡುತ್ತಿದ್ದಾರೆ, ಎಲ್ಲಾ ಕಡೆ ಈ ಕಾರ್ಯಕ್ರಮವನ್ನು ಜಾರಿ ಮಾಡುತ್ತೀರಾ ?

ಶ್ರೀ ಬಿ. ಎ. ಜೀವಿಜಯ.— ಮಾನ್ಯ ಅಧ್ಯಕ್ಷರೇ, ಮೂರು ವರ್ಷದ ಒಂದು ಯೋಜನೆಯನ್ನು ಹಾಕಿಕೊಂಡು ಹಂತ ಹಂತವಾಗಿ ರಾಜ್ಯದಲ್ಲಿರುವ ಎಲ್ಲಾ ಹೆದ್ದಾರಿಗಳಲ್ಲಿಯೂ ಮರಗಿಡಗಳನ್ನು ಬೆಳೆಸುವಂಥ ಯೋಜನೆ ಹಾಕಿಕೊಂಡಿದ್ದೇವೆ.

ವಿಷಯ : ಬೆಂಗಳೂರು ನೀಲಗಿರಿ ರಸ್ತೆಯಲ್ಲಿ ನಂಜನಗೂಡು ಬಳಿಯಲ್ಲಿನ ವೃತ್ತವನ್ನು ವಿಸ್ತಾರಗೊಳಿಸುವುದು ಕುರಿತು

ಪ್ರಶ್ನೆ : 192(718) ಶ್ರೀ ಎಂ. ಮಹದೇವ್ (ನಂಜನಗೂಡು).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು—ನೀಲಗಿರಿ ರಸ್ತೆಯ ಮೇಲೆ ನಂಜನಗೂಡಿನ ಹತ್ತಿರ ವಿಶ್ವೇಶ್ವರಯ್ಯ ವೃತ್ತದ ಬಳಿ, ಆಗಾಗ್ಗೆ ಸಂಭವಿಸುವ ಅಪಘಾತಗಳನ್ನು ತಪ್ಪಿಸುವ ಸಲುವಾಗಿ ಈ ವೃತ್ತವನ್ನು ಅತಿ ಶೀಘ್ರದಲ್ಲಿ ವಿಸ್ತರಿಸುವ ಅವಶ್ಯಕತೆ ಇರುವುದು ನಿಜವಲ್ಲವೇ ;

ಆ) ಹಾಗಿದ್ದಲ್ಲಿ ಈ ವಿಷಯಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಉತ್ತರ : ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಈ ಕಾಮಗಾರಿಯನ್ನು ತೆಗೆದುಕೊಂಡು ಅತಿ ಶೀಘ್ರದಲ್ಲಿ ಮುಗಿಸುವ ಪ್ರಸ್ತಾವನೆ ಇದೆ.

ಶ್ರೀ ಎಂ. ಮಹದೇವ್.— ಈ ಒಂದು ಕೆಲಸವನ್ನು ಮುಗಿಸುವ ದಿಸೆಯಲ್ಲಿ ಕಾಲಮಿತಿಯನ್ನು ನಿರ್ಧಾರ ಮಾಡುವುದಕ್ಕೆ ಸಾಧ್ಯವೇ ? ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ ವೃತ್ತವನ್ನು ದೊಡ್ಡವುಗಳನ್ನಾಗಿ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.— ಈ ವೃತ್ತದ ಕೆಲಸ ಮುಗಿಸಿ, ನಂತರ ಎಲ್ಲಾ ವೃತ್ತಗಳ ಬಗ್ಗೆ ಯೋಜನೆ ಮಾಡೋಣ.

ವಿಷಯ : ಕ್ರೋಂ ಟ್ಯಾನಿಂಗ್ ಕಂಪನಿಯ ವಿಚಾರ

ಪ್ರಶ್ನೆ : 194(566) ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಕ್ರೋಂ ಟ್ಯಾನಿಂಗ್ ನಿಯಮಗಳು ಇವೆ (ಜಿಲ್ಲಾವಾರು ವಿವರಗಳನ್ನೊದಗಿಸುವುದು).

ಆ) ಮೈಸೂರು ರಸ್ತೆಯಲ್ಲಿರುವ ಕ್ರೋಂ ಟ್ಯಾನಿಂಗ್ ಕಂಪನಿಯನ್ನು ಯಾವಾಗ ಸ್ಥಾಪಿಸಲಾಯಿತು

ಇ) ಸದರಿ ಕಂಪನಿಯಲ್ಲಿ ಚರ್ಮ ಹದ ಮಾಡುವ ಮತ್ತು ಚರ್ಮ ಕೆಲಸ ಮಾಡುತ್ತಿರುವವರ ನಿಮ್ನ ವರ್ಗಕ್ಕೆ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದ ಕಾರ್ಮಿಕರ ಸಂಖ್ಯೆ ಎಷ್ಟು ;

ಈ) ಸದರಿ ಕಂಪನಿಯ ಸ್ವಾಧೀನದಲ್ಲಿರುವ ಜಮೀನಿನ ವಿಸ್ತೀರ್ಣವೆಷ್ಟು ಮತ್ತು ಇತರೆ ಸಾಮಾನುಗಳ ಮೌಲ್ಯವೆಷ್ಟು ;

ಉ) ಈ ಕಂಪನಿಯು ಎಂ. ಎಸ್. ಐ. ಎಲ್‌ಗೆ ವಹಿಸಿ ಕೊಡಬಾರದೆಂದು 19 ಶಾಸಕರು ಮುಖ್ಯ ಮಂತ್ರಿಗಳಿಗೆ ಒಂದು ಮನವಿಯನ್ನು ಕೊಟ್ಟಿದ್ದರೂ ಕೂಡ ಸದರಿ ಕಂಪನಿಯನ್ನು ಎಂ.ಎಸ್.ಐ.ಎಲ್. ಕಂಪನಿಗೆವಹಿಸಿ ಕೊಟ್ಟಿರುವುದು ನಿಜವೇ ?

ಉತ್ತರ : ಶ್ರೀ ಎಸ್ ಆರ್. ಬೊಮ್ಮಾಯಿ.— (ಕೈಗಾರಿಕಾ ಮಂತ್ರಿಗಳು).—

ಅ) ಕರ್ನಾಟಕದಲ್ಲಿ ಸರ್ಕಾರಿ ಸೌಮ್ಯದಲ್ಲಿ ಒಂದೇ ಒಂದು ಟ್ಯಾನಿಂಗ್ ಕಂಪನಿಯು ಇದೆ. ಅದು ದಿ ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿ ನಿಯಮಿತ ಬೆಂಗಳೂರಿನ ಮೈಸೂರು ರಸ್ತೆಯಲ್ಲಿದೆ.

ಆ) ಈ ಕಂಪನಿಯನ್ನು 1908ರಲ್ಲಿ ಸ್ಥಾಪಿಸಲಾಯಿತು.

ಇ) ಕೆಲಸಗಾರರ ಸಂಖ್ಯೆ

ಪರಿಶಿಷ್ಟ ಜಾತಿಗಳು	104
ಪರಿಶಿಷ್ಟ ಬುಡಕಟ್ಟು	18
ಒಟ್ಟು	122

ಈ) ಕಂಪನಿ ಜಮೀನಿನ ವಿಸ್ತೀರ್ಣ— 11ಎಕರೆ 31 ಗುಂಟೆಗಳು. ಇತರ ಸಾಮಾನುಗಳ ಮೌಲ್ಯ— 64.83 ಲಕ್ಷ ರೂ.ಗಳು (ಲೆಕ್ಕಪುಸ್ತಕಗಳ ಆಧಾರದ ಮೇರೆಗೆ).

ಉ) 1. ಸರ್ಕಾರವು ದಿ ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿಯನ್ನು ಮೈಸೂರು ಸೇಲ್ಸ್

ಇಂಟರ್ ನ್ಯಾಷನಲ್‌ನಲ್ಲಿ ವಿಲೀನಗೊಳಿಸಲು ಶಾಸಕರು ಮನವಿ ಕೊಡುವ ಮುನ್ನವೇ ಒಪ್ಪಿ ಆ ದಿಶೆಯಲ್ಲಿ ಸೂಕ್ತ ಕಾರ್ಯಾಚರಣೆ ಮಾಡಿತ್ತಿದೆ. ವಿಲೀನೀಕರಣವು ಅಂತಿಮ ಘಟ್ಟದಲ್ಲಿದೆ.

2. ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿಯನ್ನು ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ನಲ್ಲಿ ವಿಲೀನಗೊಳಿಸುವುದರಿಂದ ಎಂ.ಎಸ್.ಐ.ಎಲ್ ಗಳಿಸಿದ ಲಾಭವು ಮೈಸೂರು ಕ್ರೋಂ ಟ್ಯಾನಿಂಗ್ ಕಂಪನಿಗೂ ಸಹ ದೊರೆಯುವುದು. ಈ ವಿಲೀನವು ಪೂರ್ಣಗೊಂಡ ನಂತರ ಎಂ. ಸಿ. ಟಿ. ಕಂಪನಿಯ ಕಾರ್ಮಿಕರು ಕೂಡ ಎಂ.ಎಸ್.ಐ.ಎಲ್‌ನ ವೇತನ ಶ್ರೇಣಿಯ ಲಾಭವನ್ನು ಪಡೆಯುವರು.

ಶ್ರೀ ಎ. ಮುನಿಯಪ್ಪ.— ಸ್ವಾಮಿ, ಈ ಕಂಪನಿಗೆ ಮಂಜೂರಾದ ಮೊಬಲಗನ್ನು ಯಾವ ಆಧಾರದ ಮೇಲೆ ಉಪಯೋಗಿಸಿದರು ಎನ್ನುವುದನ್ನು ತಾವು ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಹಣ ಬಿಡುಗಡೆ ಮಾಡಿದ ಮೇಲೆ ಕೆಲವು ದೂರುಗಳು ಬಂದಿರುವುದರಿಂದ ವಿಚಾರಣೆ ಮಾಡಿಸುತ್ತಿದ್ದೇವೆ.

ಶ್ರೀ ಎ. ಮುನಿಯಪ್ಪ.— ಹಣ ಮಂಜೂರಾಗಿದೆ, ಕೆಲಸ ಆಗಿದೆಯೇ ಇಲ್ಲವೇ ಎನ್ನುವುದನ್ನು ನಿಮ್ಮ ಅಧಿಕಾರಿಗಳು ನೋಡಿದ್ದಾರೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಅಧಿಕಾರಿಗಳು ನೋಡಿದ್ದಾರೆ.

ಶ್ರೀ ಎ. ಮುನಿಯಪ್ಪ.— ದೂರುಗಳು ಬಂದಮೇಲೆ ಡಿಸ್ಟ್ರಿಕ್ಟ್ ಕೌನ್ಸಿಲ್ ಸಭೆಯಲ್ಲಿ ಸಿ. ಓ. ಡಿ. ವಿಚಾರಣೆ ಮಾಡಬೇಕೆಂದು ತೀರ್ಮಾನ ಮಾಡಿದರೂ. ಬಹುತೇಕ ಕೇಸುಗಳು ಇಲ್ಲ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.— ದಿನಾಂಕ. 22-11-83ರಲ್ಲಿ ಡಿ. ಡಿ. ಸಿ. ಮೀಟಿಂಗ್‌ನಲ್ಲಿ ತಾವೇ ನಿರ್ಣಯ ಮಾಡಿದ್ದೀರಿ. ಅಸಿಸ್ಟೆಂಟ್ ಕಮೀಷನರ್‌ರವರು ತೀವ್ರವಾಗಿ ವಿಚಾರಣೆ ಮಾಡಿ, ವರದಿ ಕೊಡಬೇಕೆಂದು ಆಜ್ಞೆ ಮಾಡಿದ್ದೇವೆ. ವರದಿ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಮುನಿಯಪ್ಪ.— ಅವರ ಹೆಸರುಗಳೇ ವರದಿಯಲ್ಲಿ ಪತ್ತೆಯಾಗಿಲ್ಲ, ಅದಕ್ಕೆ ಏನು ಹೇಳುತ್ತೀರಿ ?

ಶ್ರೀ ಎಸ್ ಆರ್. ಬೊಮ್ಮಾಯಿ.— ವಿಚಾರಣೆ ಮಾಡಿ ಸ್ವಲ್ಪ ದಿವಸದಲ್ಲಿ ವರದಿ ಕೊಡುತ್ತಾರೆ.

(ಪ್ರಶ್ನೆ : 193(70))

ಶ್ರೀ ಹೆಚ್ ಜಿ. ಗೋವಿಂದೇಗೌಡ.— ಮಾನ್ಯ ಅಧ್ಯಕ್ಷರೇ, ಖಾಸಗೀ ಜಾಗದಲ್ಲಿಯೇ ಆಗಲಿ, ಅರಣ್ಯ ಜಾಗದಲ್ಲಿಯೇ ಆಗಲಿ ಅಥವಾ ರೆವಿನ್ಯೂ ಜಾಗದಲ್ಲಿಯೇ ಆಗಲಿ, ಹುಲಿ ಜಾನುವಾರುಗಳನ್ನು ಹಿಡಿದರೆ ಅದಕ್ಕೆ ಪರಿಹಾರವನ್ನು ಕೊಡುತಕ್ಕ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಅಡಿಷನಲ್ ಫಾರೆಸ್ಟ್ ಆಫೀಸರ್‌ರವರಿಗೆ 250 ರೂಪಾಯಿಗಳವರೆಗೆ ಪರಿಹಾರ ಕೊಡುವುದಕ್ಕೆ ಅವಕಾಶ ವಿದೆ ಆದರೆ ಅದು ಸಾಕಾಗುವುದಿಲ್ಲ. 500 ರೂಪಾಯಿಗಳಿಗೂ ಮೇಲ್ಪಟ್ಟು ಪರಿಹಾರ ಧನವನ್ನು ಕೊಡತಕ್ಕ ವ್ಯವಸ್ಥೆ ಮಾಡಿದರೆ ವ್ಯವಸಾಯಗಾರರಿಗೆ ಕೂಡಲೇ ಪರಿಹಾರವನ್ನು ಪಡೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಇದನ್ನು ಪರಿಶೀಲಿಸುತ್ತೀರಾ ?

ಶ್ರೀ ಬಿ. ಎ. ಜೀವಿಜಯ.— ಅಧ್ಯಕ್ಷರೇ, ಈ ಎರಡು ಸಲಹೆಗಳು ಕೂಡ ಸರ್ಕಾರದ ಪರಿಶೀಲನೆಯಲ್ಲಿವೆ.

ಶ್ರೀ ಎಂ. ಮಹದೇವ್.— ಅಧ್ಯಕ್ಷರೇ. ನಾವು ಇಲ್ಲಿ ಪದೇ ಪದೇ ಆನೆಗಳ ಕಾಟ, ಹುಲಿಗಳ ಕಾಟವಿದೆ ಎಂದು ಪೇಳಿದಾಗ್ಯೂ ಕೂಡ ವ್ಯವಸ್ಥಿಗಳವರು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಡುತ್ತಾರೆ ಆದರೆ ಇಲ್ಲಿಯವರೆಗೆ ಯಾವ ಅಧಿಕಾರಿಗಳೂ ಸಹ ತಿರುಗಿ ನೋಡಿರುವುದಿಲ್ಲ. ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡಿರುವುದಿಲ್ಲ. ಆದ್ದರಿಂದ ಇನ್ನು ಮುಂದಾದರೂ ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎ ಜೀವಿಜಯ. ಅಧ್ಯಕ್ಷರೇ ಇದು ಸತ್ಯಕ್ಕೆ ದೂರವಾದುದು.

ವಿಷಯ . ಕೊಡಗು ಜಿಲ್ಲೆಯ ಅರಣ್ಯಗಳಲ್ಲಿ ಅನಾದಿ ಕಾಲದಿಂದ ವಾಸಿಸುತ್ತಿರುವ ಜನಗಳಿಗೆ ಅವರು ಇರುವ ಜಾಗದಲ್ಲೇ ಅನುಭೋಗದ ಹಕ್ಕನ್ನು ಕೊಡುವ ಬಗ್ಗೆ

ಪ್ರಶ್ನೆ : 194 (524) ಶ್ರೀ ಎಂ. ಎಂ. ನಾಣಯ್ಯ (ಮಡಿಕೇರಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕೊಡಗು ಜಿಲ್ಲೆಯ ಅರಣ್ಯಗಳಲ್ಲಿ ಅನಾದಿಕಾಲದಿಂದ ವಾಸಿಸುತ್ತಿರುವ ಜನರು ಅವರು ಇರುವ ಜಾಗದಲ್ಲೇ ಅನುಭೋಗದ ಹಕ್ಕನ್ನು ಕೇಳಿರುವುದು ನಿಜವೇ ;

ಆ) ಹಾಗಾದರೆ ಹಾಗೆ ಕೇಳಿದ ಕುಟುಂಬಗಳ ಸಂಖ್ಯೆ ಎಷ್ಟು ;

ಇ) ಆ ಕುಟುಂಬಗಳಿಗೆ ಅವರು ಅನುಭೋಗಿಸುತ್ತಿರುವ ಜಾಗದ ಪಟ್ಟಾ ಕೊಡಲು ಸಾಧ್ಯವೆ;

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣ ಮತ್ತು ಮಾಡಿದ ಬದಲಿ ವ್ಯವಸ್ಥೆ ಏನು ?